<u>ಕರ್ನಾಟಕ ಸರ್ಕಾರ</u>

ಸಂಖ್ಯೆ:ಇಡಿ: ೯೧ :ಯೋಸಕ ೨೦೧೧

ಕರ್ನಾಟಕ ಸರ್ಕಾರದ ಸಚಿವಾಲಯ
ಬಹುಮಹಡಿ ಕಟ್ಟಡ
ಬೆಂಗಳೂರು, ದಿನಾಂಕ:೦೪-೦೭-೨೦೧೧

# ಸುತ್ತೋಲೆ

ವಿಷಯ:-ಸ್ವಾಮಿ ವಿವೇಕಾನಂದರ ೧೫೦ನೇ ಜನ್ಮ ದಿನೋತ್ಸವದ ಅಂಗವಾಗಿ ರಾಮಕೃಷ್ಣ ಮಠ ನವದೆಹಲಿ ರವರು ನಡೆಸುವ ಆನ್ ಲೈನ್ ಸ್ಪರ್ಧೆಯಲ್ಲಿ ವಿದ್ಯಾರ್ಥಿಗಳು ಭಾಗವಹಿಸುವ ಬಗ್ಗೆ.

ಸ್ವಾಮಿ ವಿವೇಕಾನಂದರು ಭಾರತದ ಅಗ್ರಗಣ್ಯ ಆಧ್ಯಾತ್ಮಿಕ ಚಿಂತಕರಲ್ಲಿ ಒಬ್ಬರು. ರಾಮಕೃಷ್ಣ ಪರಮಹಂಸರ ಶಿಷ್ಯರಾಗಿ ಅಮೇರಿಕಾದ ಚಿಕಾಗೋದಲ್ಲಿ ಅವರು ಮಾಡಿದ ಭಾಷಣದಿಂದ ಒಂದೇ ದಿನದಲ್ಲಿ ಅಮೇರಿಕ ಪ್ರಜೆಗಳಲ್ಲಿ ಆಧ್ಯಾತ್ಮಿಕ ಸಂಚಲನವನ್ನು ಉಂಟು ಮಾಡಿದ ಮಹಾ ಚೇತನ. ಅಂತಹ ಸ್ವಾಮಿ ವಿವೇಕಾನಂದರು ಭಾರತದಲ್ಲಿ ಜನಿಸಿ ಈ ಹೊತ್ತಿಗೆ ೧೫೦ ವರ್ಷಗಳು ಸಂದುತ್ತಿದೆ. ರಾಷ್ಟ್ರದಾದ್ಯಂತ ಸ್ವಾಮಿ ವಿವೇಕಾನಂದರ ೧೫೦ನೇ ಜನ್ಮದಿವಸವನ್ನು ಆಚರಿಸಲು ಭಾರತದ ಸನ್ಮಾನ್ಯ ಪ್ರಧಾನ ಮಂತ್ರಿಗಳಾದ ಡಾ.ಮನಮೋಹನಸಿಂಗ್‌ರವರು ದೆಹಲಿಯ ವಿಜ್ಞಾನ ಭವನದಲ್ಲಿ ದಿನಾಂಕ:೧೨-೦೧-೨೦೧೧ರಂದು ವರ್ಣ ರಂಜಿತ ಕಾರ್ಯಕ್ರಮದಲ್ಲಿ ಚಾಲನೆ ನೀಡಿರುತ್ತಾರೆ. ರಾಮಕೃಷ್ಣ ಮಠ ಮತ್ತು ರಾಮಕೃಷ್ಣ ಮಿಷನ್‌ರವರ ಮಾರ್ಗದರ್ಶನದಲ್ಲಿ ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ. ಈ ಕಾರ್ಯಕ್ರಮಗಳು ೨೦೧೦ ರಿಂದ ಪ್ರಾರಂಭವಾಗಿದ್ದು, ೨೦೧೪ ರವರೆಗೆ ಮತ್ತು ಅದಕ್ಕೂ ನಂತರದ ವರ್ಷಗಳವರೆಗೆ ನಡೆಯಲಿದೆ. ಅನೇಕ ರಾಜ್ಯಗಳೂ ಈ ಕಾರ್ಯಕ್ರಮವನ್ನು ಯಶಸ್ವಿಯಾಗಿ ನಡೆಸಲು ತಮ್ಮದೇ ಆದ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿರುತ್ತವೆ.

ಈ ಕಾರ್ಯಕ್ರಮದ ಅಂಗವಾಗಿ ನವದೆಹಲಿಯ ರಾಮಕೃಷ್ಣ ಮಿಷನ್ ರವರು ಒಂದು ನೂತನ ಕಾರ್ಯಕ್ರಮವನ್ನು ಜಾರಿಗೊಳಿಸಲು ಉದ್ದೇಶಿಸಿದ್ದು, ರಾಷ್ಟ್ರಾದ್ಯಂತ ಎಲ್ಲಾ ಶಾಲಾ ಕಾಲೇಜುಗಳ ಮಕ್ಕಳಿಗೆ "ಆನ್‌ಲೈನ್ ಕ್ವಿಜ್" ಸ್ಪರ್ಧೆಯನ್ನು ಏರ್ಪಡಿಸದೆ. ಇದರ ಉದ್ದೇಶ ರಾಷ್ಟ್ರದಲ್ಲಿ ಮುಂದಿನ ವೈಯಕ್ತಿಕ ಹಾಗೂ ಗುಂಪಿನ ಮುಂದಾಳತ್ವವನ್ನು ವಹಿಸುವ ಚಾರಿತ್ರ್ಯವುಳ್ಳ ಹಾಗೂ ಸತ್ವಶಾಲಿ ನಾಯಕರುಗಳನ್ನು ಗುರುತಿಸುವುದೇ ಆಗಿದೆ. ೬ನೇ ತರಗತಿಯಿಂದ ೧೨ನೇ ತರಗತಿಯವರೆಗೆ ವ್ಯಾಸಂಗ ಮಾಡುತ್ತಿರುವ ಎಲ್ಲಾ ವಿದ್ಯಾರ್ಥಿಗಳು ಈ "ಆನ್‌ಲೈನ್ ಕ್ವಿಜ್" ಸ್ಪರ್ಧೆಯಲ್ಲಿ ಭಾಗವಹಿಸಬಹುದಾಗಿರುತ್ತದೆ. ಈ ಸ್ಪರ್ಧೆಯು ಮೂರು ಹಂತಗಳಲ್ಲಿ ನಡೆಯುತ್ತದೆ. ಅವುಗಳೆಂದರೆ, ಅರ್ಹತಾ ಸುತ್ತು, ಅಂತಿಮಪೂರ್ವ ಸುತ್ತು ಮತ್ತು ಅಂತಿಮ ಸುತ್ತು.

ಈ ಸ್ಪರ್ಧೆಯಲ್ಲಿ ಭಾವಹಿಸಲು, ಈ ಸುತ್ತೋಲೆಯೊಂದಿಗೆ ಲಗತ್ತಿಸಿರುವ ನಮೂನೆಯನ್ನು ಎಲ್ಲಾ ಶಾಲೆಗಳ ಮುಖ್ಯಸ್ಥರುಗಳಿಗೆ ತಲುಪಿಸಿ ಆ ಶಾಲೆಗಳ ವಿದ್ಯಾರ್ಥಿಗಳು ಉತ್ಸಾಹದಿಂದ ಸ್ಪರ್ಧೆಯಲ್ಲಿ ಭಾಗವಹಿ

ಸುವಂತೆ ಸೂಚನೆ ನೀಡಲು ಎಲ್ಲಾ ಜಿಲ್ಲೆಗಳ ಉಪನಿರ್ದೇಶಕರು/ಕ್ಷೇತ್ರ ಶಿಕ್ಷಣಾಧಿಕಾರಿಗಳು ಸಾರ್ವಜನಿಕ ಶಿಕ್ಷಣ ಇಲಾಖೆರವರು ಕ್ರಮವಹಿಸತಕ್ಕದ್ದು. ಜುಲೈ ೧೫ರವರಗೆ ಅರ್ಹತಾ ಸುತ್ತಿಗೆ ಅವಕಾಶವಿರುತ್ತದೆ.

ಕರಡು ಸರ್ಕಾರದ ಕಾರ್ಯದರ್ಶಿಗಳು
ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ
ಇವರಿಂದ ಅನುಮೋದಿತವಾಗಿದೆ]

[ಐ.ಎಸ್.ಮಾಗಿ]
ವಿಶೇಷಾಧಿಕಾರಿ ಹಾಗೂ ಪದನಿಮಿತ್ತ
ಸರ್ಕಾರದ ಅಧೀನ ಕಾರ್ಯದರ್ಶಿ [ಯೋಜನೆ]
ಶಿಕ್ಷಣ ಇಲಾಖೆ.

**ಕರ್ನಾಟಕ ಸರ್ಕಾರ**

**ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರು–01.**

ಸಂಖ್ಯೆ:ಸಿ4(3)ಇತರೆ–08/2011–12 ದಿನಾಂಕ:–04–07–2011

**ಜ್ಞಾಪನ**

ಸರ್ಕಾರದ ಸುತ್ತೋಲೆ ಸಂಖ್ಯೆ ಇಡಿ 191 ಯೋಸಕ 2011 ದಿನಾಂಕ:–04–07–2011 ರಲ್ಲಿ ತಿಳಿಸಿರುವಂತೆ ಅಗತ್ಯ ಕ್ರಮ ಕೈಗೊಂಡು ಕೈಗೊಂಡ ಕ್ರಮದ ಬಗ್ಗೆ ವರದಿಯನ್ನು ಈ ಕಛೇರಿಗೆ ಕಳುಹಿಸಿಕೊಡಲು ತಿಳಿಸಿದೆ. ಈ ಪತ್ರದೊಡನೆ "ಆನ್‌ಲೈನ್ ಕ್ವಿಜ್" ಸ್ಪರ್ಧೆಯ ನಮೂನೆಯನ್ನು ಸಹ ಲಗತ್ತಿಸಿ ಕಳುಹಿಸಿದೆ.

ನಿರ್ದೇಶಕರು (ಪ್ರೌಢಶಿಕ್ಷಣ)

ಇವರಿಗೆ:–

1. ಸಾರ್ವಜನಿಕ ಶಿಕ್ಷಣ ಇಲಾಖೆಯ ಬೆಂಗಳೂರು ಮತ್ತು ಮೈಸೂರು ವಿಭಾಗದ ಎಲ್ಲಾ ಜಿಲ್ಲಾ ಉಪನಿರ್ದೇಶಕರುಗಳಿಗೆ
2. ಸಾರ್ವಜನಿಕ ಶಿಕ್ಷಣ ಇಲಾಖೆಯ ಬೆಂಗಳೂರು ಮತ್ತು ಮೈಸೂರು ವಿಭಾಗದ ಎಲ್ಲಾ ತಾಲ್ಲೂಕು ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ

ಪ್ರತಿಯನ್ನು:–

3. ಸರ್ಕಾರದ ಕಾರ್ಯದರ್ಶಿಗಳು, ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಶಿಕ್ಷಣ ಇಲಾಖೆ, ಬಹುಮಹಡಿಗಳ ಕಟ್ಟಡ, ಇವರಿಗೆ ಮಾಹಿತಿಗಾಗಿ
4. ಶ್ರೀ ಎಸ್.ಎನ್ ಚಕ್ರವರ್ತಿ, ಶ್ರೀ ರಾಮಕೃಷ್ಣ ಆಶ್ರಮ, ಮೈಸೂರು ಇವರಿಗೆ ಮಾಹಿತಿಗಾಗಿ
5. ಕಛೇರಿ ಪ್ರತಿ

E:\C4(5)\OTHERS.doc

## HOW TO PARTICIPATE IN THIS ONLINE COMPETITION

**THERE IS NO ENTRY FEE**

**YOU CAN ANSWER IN ENGLISH OR HINDI**

REGISTRATION:-

1. Go to http://awakeningindia.orgweb site and choose the *online competition* option from the *Programmes* menu. Click the *Registration* button on the screen
2. Register for the contest by filling out the registration form. Make sure you fill in all the necessary details in the registration form.

STAGE 1: QUALIFIER ROUND

3. Log-on to the quiz online and answer 96 multiple –choice question in 1 hour. The time remaining at the time of the last answer will be shown on your screen at all times. While answering if you lost internet connection you can log-on again and continue either on the same day or even later.
4. In each question, you will be given 4 options. Choose the most appropriate answer as per your own thinking.
5. Once you have made your choice, go ahead and click the *Next* button to confirm your answer.
6. Remember that once you have confirmed an answer for a question, it is stored as your final answer to that question.
7. The Quiz will end either on answering the last (96th) question or when the allotted time runs out.
8. You will receive instructions for obtaining your Leadership Quotient on the final screen of the Quiz.

STAGE 2: SEMIFINALS

9. Some of you will receive an invitation for the Next Round of the Quiz, if you qualify and are shortlisted.